# ‘ನಟನೆ ಎಂದರೆ ನಿರಂತರ ಕಲಿಕೆ’



‘ಸಿದ್ಧಾರ್ಥ’, ‘ರನ್ ಆ್ಯಂಟನಿ’, ‘ಅನಂತು ವರ್ಸಸ್ ನುಸ್ರತ್’, ‘ಗ್ರಾಮಾಯಣ’, ‘10’ – ವಿನಯ್ ರಾಜ್‌ಕುಮಾರ್ ಅವರ ಸಿನಿಮಾಗಳ ಪಟ್ಟಿಯನ್ನು ನೋಡಿದರೆ ಸಾಕು, ವೈವಿಧ್ಯದ ಹಲವು ತಿರುವುಗಳ ದಾರಿಯೊಂದನ್ನು ಹಾದುಬಂದ ಅನುಭವವಾಗುತ್ತದೆ. ಈ ವೈವಿಧ್ಯದ ಹಿಂದೆ ಅವರ ಅಗಾಧ ಸಿನಿಮಾಪ್ರೀತಿ ಮತ್ತು ಆಯ್ಕೆಯ ಸ್ಪಷ್ಟತೆಯೂ ಇರುವುದು ಅವರ ಜೊತೆಗೆ ಮಾತನಾಡಿದರೆ ತಿಳಿಯುತ್ತದೆ. ಹೆಸರಲ್ಲಿನ ವಿನಯವನ್ನು ಮಾತುಗಳಲ್ಲಿಯೂ ತುಳುಕಿಸುವ ಅವರ ಸಂದರ್ಶನ ಇಲ್ಲಿದೆ.

■ ಪದ್ಮನಾಭ ಭಟ್

◆ ‘ಗ್ರಾಮಾಯಣ’ ಸಿನಿಮಾ ಬಗ್ಗೆ ಹೇಳಿ...

ಗ್ರಾಮಾಯಣ ಪೂರ್ತಿಯಾಗಿ ಹಳ್ಳಿಯಲ್ಲಿ ನಡೆಯುವ ಸಿನಿಮಾ. ಹಳ್ಳಿಯಲ್ಲಿ ಇದ್ದುಕೊಂಡೇ ಏನಾದರೂ ಸಾಧನೆ ಮಾಡಬಹುದು ಎಂಬುದನ್ನು ಬಿಂಬಿಸುವ ಸಿನಿಮಾ. ಈಗ ಎಲ್ಲರೂ ಹಳ್ಳಿಯನ್ನು ಬಿಟ್ಟು ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಹಳ್ಳಿಗಳೆಲ್ಲ ಖಾಲಿಯಾಗುತ್ತಿವೆ. ಹಿರಿಯ ತಲೆಮಾರಿನವರು ಮಾತ್ರ ಹಳ್ಳಿಗಳಲ್ಲಿ ಇದ್ದಾರೆ. ಇನ್ನೊಂದು ಎರಡು ಮೂರು ತಲೆಮಾರು ಹೀಗೆಯೇ ನಗರಕ್ಕೆ ವಲಸೆ ಹೋಗುತ್ತಲಿದ್ದರೆ ಹಳ್ಳಿಗಳೇ ಪೂರ್ತಿ ಖಾಲಿಯಾಗಿಬಿಡಬಹುದು. ಪರಿಸ್ಥಿತಿ ಹಾಗಿದೆ. ನಗರಕ್ಕೆ ವಲಸೆ ಬರುವ ಎಲ್ಲರ ಮನಸ್ಸಿನಲ್ಲಿಯೂ ಇಲ್ಲಿಗೆ ಬಂದು ಏನಾದರೂ ಸಾಧನೆ ಮಾಡಬೇಕು ಎಂದಿರುತ್ತದೆ. ಆದರೆ ಆ ಸಾಧನೆಯನ್ನು ಹಳ್ಳಿಯಲ್ಲಿದ್ದುಕೊಂಡೇ ಮಾಡಬಹುದು. ಇದನ್ನೇ ‘ಗ್ರಾಮಾಯಣ’ ಸಿನಿಮಾದ ಮೂಲಕ ನಾವು ಹೇಳಲು ಹೊರಟಿದ್ದೇವೆ.

ಕರ್ನಾಟಕದ ಸಂಸ್ಕೃತಿಯ ಬಗ್ಗೆ, ಗ್ರಾಮೀಣ ಭಾಗದ ಹಬ್ಬಗಳ ಬಗ್ಗೆಯೆಲ್ಲ ವಿವರವಾಗಿ ಹೇಳುತ್ತ ಹೋಗುವ ಸಿನಿಮಾ ಇದು. ಹಳ್ಳಿ ಜನರ ಮುಗ್ಧ ಮನಸ್ಸುಗಳು ಮತ್ತು ಅದನ್ನು ಕಲುಷಿತಗೊಳಿಸುವ ದುಷ್ಟಶಕ್ತಿಗಳು ಎರಡನ್ನೂ ಈ ಸಿನಿಮಾದಲ್ಲಿ ತೋರಿಸಿದ್ದೇವೆ. ಒಂದಿಷ್ಟು ಹಳ್ಳಿಯ ಪಾತ್ರಗಳನ್ನೇ ಇಟ್ಟುಕೊಂಡು, ಕಥೆ ಸಿದ್ಧಮಾಡಿಕೊಂಡು ಈ ಸಿನಿಮಾ ಮಾಡುತ್ತಿದ್ದೇವೆ.

◆ ನೀವು ಹುಟ್ಟಿ ಬೆಳೆದಿದ್ದೆಲ್ಲವೂ ಬೆಂಗಳೂರಿನಲ್ಲಿ. ಹಳ್ಳಿ ಕಥೆಯ ಈ ಪಾತ್ರಕ್ಕೆ ಹೇಗೆ ಸಿದ್ಧರಾದಿರಿ?

ನಾನು ಹುಟ್ಟಿ ಬೆಳೆದಿದ್ದೆಲ್ಲ ಸಿಟಿಯಲ್ಲಿ ನಿಜ. ಆದರೆ ಯಾವಾಗಲೂ ನಾವು ಹಳ್ಳಿಗಳ ಜೊತೆ ಸಂಪರ್ಕ ಇಟ್ಟುಕೊಂಡೇ ಇದ್ದೆವು. ನಮ್ಮ ತಾತನ ಊರು ಗಾಜನೂರು, ನನ್ನ ಅಮ್ಮನ ಊರು ಸಿದ್ದಾಪುರ. ಈ ಎರಡೂ ಹಳ್ಳಿಗಳಿಗೆ ಪ್ರತಿ ಬೇಸಿಗೆ ರಜೆಯಲ್ಲಿಯೂ ನಾನು ಈ ಹಳ್ಳಿಗಳಲ್ಲಿಯೇ ಕಳೆಯುತ್ತಿದ್ದೆ. ಹಾಗಾಗಿ ಹಳ್ಳಿ ಬದುಕು ನನಗೆ ಹೊಸದೂ ಅಲ್ಲ, ಅಪರಿಚಿತವೂ ಅಲ್ಲ.

ಇದು ಕಡೂರು ಎಂಬ ಹಳ್ಳಿಯಲ್ಲಿ ನಡೆಯುವ ಕಥೆ. ಈ ಸಿನಿಮಾಗೆ ತುಂಬ ದಿನ ಹಿಂದೆಯೇ ಸುಮಾರು ಹತ್ತು ದಿನಗಳ ಕಾಲ ಹಳ್ಳಿಯಲ್ಲಿಯೇ ಇದ್ದು, ಅಲ್ಲಿನ ಜನರ ಜೀವನ, ಅವರ ಮಾತು, ಸಂಸ್ಕೃತಿ ಎಲ್ಲವನ್ನೂ ಅಧ್ಯಯನ ಮಾಡಿ ಸಿದ್ಧತೆ ನಡೆಸಿದ್ದೀವಿ.

◆ ಒಂದು ಸಿನಿಮಾವನ್ನು ಒಪ್ಪಿಕೊಳ್ಳುವಾಗ ಯಾವೆಲ್ಲ ಅಂಶಗಳನ್ನು ಗಮನಿಸುತ್ತೀರಾ?

ನಾನು ಮೊದಲು ಕಥೆ ಕೇಳ್ತೀನಿ. ಆಮೇಲೆ ನಾಲ್ಕೈದು ದಿನ ಸುಮ್ಮನೆ ಬಿಟ್ಟು ಬಿಡ್ತೀನಿ. ಆ ದಿನಗಳಲ್ಲಿ ಆ ಕಥೆ ನನಗೆ ತುಂಬ ಕಾಡಿದರೆ ನನಗೆ ಇಷ್ಟವಾಗಿದೆ ಎಂದು ಅರ್ಥ. ಸಿನಿಮಾದಲ್ಲಿ ಒಳ್ಳೆಯ ಭಾವನೆಗಳಿರಬೇಕು, ಮನರಂಜನೆಯೂ ಇರಬೇಕು. ಜನರಿಗೆ ಒಂದು ಒಳ್ಳೆಯ ಸಂದೇಶವನ್ನು ದಾಟಿಸುವಂತಿರಬೇಕು. ಇವೆಲ್ಲಕ್ಕಿಂತ ಹೆಚ್ಚಾಗಿ ನನಗೆ ಆ ಸಿನಿಮಾ ಮಾಡುವುದರಿಂದ ಖುಷಿ, ತೃಪ್ತಿ ಸಿಗುತ್ತದೆ ಎಂದು ಅನಿಸಬೇಕು.

◆ ನೀವು ಹಲವು ಪ್ರಸಿದ್ಧ ನಟರು ಇರುವ ರಾಜ್ ಕುಟುಂಬದಿಂದ ಬಂದವರು. ಈ ಹಿನ್ನೆಲೆ